ಅಧ್ಯಕ್ಷರು : ಈ ಒಂದು ಪ್ರಶ್ನೆಯೇ ಅರ್ಧ ಗಂಟೆ ಸಮಯ ತೆಗೆದುಕೊಂಡಿದೆ. ಬ್ಯಾಕ್‌ಲಾಗ್ ಪ್ರಶ್ನೆಗಳಿಗೆ ಅರ್ಧ ಗಂಟೆ ತೆಗೆದುಕೊಳ್ಳಲಾಯಿತು. ಹೀಗಾದರೆ ಹೇಗೆ? ನೀವು ಮತ್ತೆ ಉಪ ಪ್ರಶ್ನೆಗಳನ್ನು ಕೇಳಬೇಕಾದರೆ, ನೀವು ನಂತರ ಮಂತ್ರಿಗಳನ್ನು ಕೇಳಿ. ಇಲ್ಲೇ ಕೇಳಬೇಕು ಎನ್ನುವುದು ಏನಿದೆ? ಒಂದೊಂದು ಪ್ರಶ್ನೆಗೆ ಅರ್ಧ ಗಂಟೆ ತೆಗೆದುಕೊಂಡರೆ ನಾನು ಮ್ಯಾನೇಜ್ ಮಾಡುವುದು ಹೇಗೆ? ನೀವೇ ಹೇಳಿ

ಶ್ರೀ ಚಂದ್ರಕಾಂತ ಬೆಲ್ಲದ್ : ಇಡೀ ಕರ್ನಾಟಕದ ಅಭಿವೃದ್ಧಿಯಾಗಲೀ, ಇಡೀ ಕರ್ನಾಟಕ ಇಂಡಸ್ಟ್ರಿಯಲ್ಲಿ ಬೆಳವಣಿಗೆಯಾಗಲೀ ಎಂದು ಅಪೇಕ್ಷೆ ಇದೆ ಸಾರ್ ಆದರೆ ಉತ್ತರ ಕರ್ನಾಟಕದಲ್ಲಿ ಇಂಡಸ್ಟ್ರೀಗಳು ಏಕೆ ಬರುವುದಿಲ್ಲವೆಂದು ಹೇಳುತ್ತಿದ್ದಾರೆ. ಬೆಂಗಳೂರಿನಲ್ಲಿ ಮಾತ್ರ ಏಕೆ ಬರುತ್ತವೆ, ಹುಬ್ಬಳ್ಳಿಯಲ್ಲಿ ಏಕೆ ಬರುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಏನು ಕೆಲಸ ಮಾಡುತ್ತಿದೆ ಎಂಬುದನ್ನು ನಾವು ಕೇಳುತ್ತಿದ್ದೇವೆ. ಮೂಲಭೂತ ಸೌಕರ್ಯಗಳನ್ನು ಒದಗಿಸಿ ನೀವು ಪ್ರೈವೇಟ್‌ನವರಿಗೆ ಏನೂ ಕೊಡಬೇಡಿ.

ಶ್ರೀ ಆರ್.ವಿ. ದೇಶಪಾಂಡೆ : ಬೇಲೂರಿನಮ ಇಂಡಸ್ಟ್ರಿಯಲ್ ಎಸ್ಟೇಟ್ ಇದೆಯಲ್ಲಾ ಅಂಥ ಒಂದು ಇಂಡಸ್ಟ್ರಿಯಲ್ ಎಸ್ಟೇಟ್ ಎಲ್ಲಿಯಾದರೂ ಇದೆ ಏನ್ರಿ ಅಂತಹದ್ದು ಮಹಾರಾಷ್ಟ್ರದಲ್ಲಿ ಇಲ್ಲ ಸಾರ್. ಅಲ್ಲಿ ಇದೆಯಲ್ಲಾ Such a nice industrial estate in Belur we have developed, one of the best industrial estates in the country - I can say in the world. All Infrastmenture are there ರೋಡ್ಸ್ ಇವೆ, ಡ್ರೈನೇಜಸ್ ಇವೆ, ಪವರ್ ಸ್ಟೇಷನ್ ಮಾಡಿದ್ದೇವೆ. ಸುಮಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. What more government can do? you must understand this ಕೈಗಾರಿಕೆಗಳನ್ನು ನಾವು ಪ್ರಾರಂಭ ಮಾಡಲು ಆಗುತ್ತದೆಯೇ? ಕೈಗಾರಿಕೆಗಳನ್ನು ಪ್ರಾರಂಭ ಮಾಡಲು ಜನ ಮುಂದೆ ಬರಬೇಕು.

ಅಧ್ಯಕ್ಷರು : ಒಂದು ಪ್ರಶ್ನೆ ಮೇಲೆ 12 ಉಪಪ್ರಶ್ನೆಗಳನ್ನು ಕೇಳಿದ್ದೀರಿ. ಇಲ್ಲಿಗೆ ಸಾಕು. ಇವತ್ತು ಉಳಿದಿರುವ ಇತರ ಪ್ರಶ್ನೆಗಳನ್ನು ಮುಂದಿನ ದಿವಸಗಳಲ್ಲಿ ತೆಗೆದುಕೊಳ್ಳಲಾಗುತ್ತದೆ. 8ನೇ ತಾರೀಖಿನೊಳಗೆ ತೆಗೆದುಕೊಳ್ಳಲಾಗುತ್ತದೆ. ತಾವು ದಯವಿಟ್ಟು ಸಹಕರಿಸಬೇಕು. ಯಾವುದೇ ಪ್ರಶ್ನೆಗಳೂ ಲ್ಯಾಪ್ಸ್ ಆಗುವುದಿಲ್ಲ. ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಸದನದಲ್ಲಿ ಮುಂದಿಡಲಾದ ಕಾಗದ ಪತ್ರಗಳು.

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ, ನಗರ ಯೋಜನೆ ಮತ್ತು ನಗರಸಭೆ ಸಚಿವರು) : ಮಾನ್ಯ ಅಧ್ಯಕ್ಷರೆ, 1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48 (5) ಮತ್ತು 49ನೇ ಪ್ರಕರಣದ ಮೇರೆಗೆ: ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ 2001-2002ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು : ಮಾನ್ಯ ಸಚಿವರಾದ ಶ್ರೀ ಕೌಜಲಗಿಯವರು ಇಲ್ಲ.

4. ಅರ್ಜಿಗಳನ್ನೊಪ್ಪಿಸುವುದು.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ತುರುವೇಕೆರೆ) : ಮಾನ್ಯ ಅಧ್ಯಕ್ಷರೆ, ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕು, ಮಾಯಸಂದ್ರ ಹೋಬಳಿಯು ತುಂಬಾ ಹಿಂದುಳಿದ ಪ್ರದೇಶವಾಗಿದ್ದು ಈ ಭಾಗದಲ್ಲಿ ಬರುವ ಅಂಬುಲದೇವಹಳ್ಳಿ ಸುಮ್ಮನಹಳ್ಳಿ, ಮಲ್ಲೇನಹಳ್ಳಿ,

ಕೊಪ್ಪ, ಕೊಪ್ಪದ ಪಾಳ್ಯ, ಮುತ್ಸಂದ್ರ ವಿಠಲಾಪುರಗಳಲ್ಲಿ ಸರಿಯಾದ ರಸ್ತೆಗಳಿಲ್ಲದೆ ಜನರು ಓಡಾಡಲು ತುಂಬಾ ತೊಂದರೆಯಾಗಿರುವುದರಿಂದ, ಸಾರ್ಕರ ಇದಕ್ಕೆ ತಕ್ಷಣ ಸ್ಪಂದಿಸಿ, ಈ ಭಾಗದ ಜನರಿಗೆ ರಸ್ತೆ ಮಾಡಿಸಿ, ಬಸ್ಸುಗಳ ಸೌಕರ್ಯವನ್ನು ಒದಗಿಸಬೇಕು ಎನ್ನು ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ ಮತ್ತು ತುರುವೇಕೆರೆ ತಾಲ್ಲೂಕು ದಂಡಿನಶಿವರ ಹೋಬಳಿಗೆ ಸೇರಿದ ಚಿಕ್ಕಗೊರಘಟ್ಟ ಕುರುಬರಹಳ್ಳಿ, ಚಿಮ್ಮನಹಳ್ಳಿ, ಡಿ. ಶೆಟ್ಟಿಹಳ್ಳಿ, ದೊಂಬರಹಳ್ಳಿ, ಸಿದ್ದನಹಟ್ಟಿ, ದೊಡ್ಡಗೊರಘಟ್ಟ ಈ ಗ್ರಾಮಗಳ ಗ್ರಾಮಸ್ಥರು ಆಸ್ಪತ್ರೆ, ಪಶು ಆಸ್ಪತ್ರೆ, ಸಂತೆಸಾರಿಗೆಗಳಿಗೆ ಹೋಗಲು ಅನುಕೂಲವಾಗುವಂತೆ ಹೇಮಾವತಿ ನದಿಯ ನೀರು ಹರಿಯುತ್ತಿರುವ ಹಳ್ಳಕ್ಕೆ ಒಂದು ಸಂಪರ್ಕ ಸೇತುವೆಯನ್ನು ನಿರ್ಮಾಣ ಮಾಡಿ ಆ ಕಡೆ ಇರತಕ್ಕಂಥ 'ಡಿ' ಕಲ್ಕೆರೆ ಗ್ರಾಮಕ್ಕೆ ಹೋಗಲು ಅನುಕೂಲ ಮಾಡಿಕೊಡುವ ಬಗ್ಗೆ ಸರ್ಕಾರವನ್ನು ಒತ್ತಾಯಿಸುವ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ಅರ್ಜಿಗಳನ್ನು ಒಪ್ಪಿಸಲಾಯಿತು.

ಅಧ್ಯಕ್ಷರು : ಈಗ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಂಡು ನಂತರ ನಿಯಮ 69ಅನ್ನು ತೆಗೆದುಕೊಳ್ಳೋಣ. ಶೂನ್ಯ ವೇಳೆಯನ್ನು ತೆಗೆದುಕೊಂಡರೆ ಮಧ್ಯಾಹ್ನ 2 ಗಂಟೆಯವರೆಗೆ ಅದೇ ಆಗುತ್ತದೆ. ಶೂನ್ಯ ವೇಳೆಯನ್ನೇ ತೆಗೆದುಕೊಳ್ಳಬೇಕೆಂದರೆ ಅದಕ್ಕೆ ನನ್ನಧೇನೂ ಅಭ್ಯಂತರವಿಲ್ಲ.

ಶ್ರೀ ಬಿ.ಆರ್. ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೇ, ಶೂನ್ಯವೇಳೆಯಲ್ಲಿ ನಾನು ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದಿತ್ತು.

ಅಧ್ಯಕ್ಷರು : ಈಗ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ. ಇವರದು ಮುಗಿಯಲಿ. ಅವರದು ಆದಮೇಲೆ ತಮಗೆ ಅವಕಾಶಕೊಡುತ್ತೇನೆ.

ಶ್ರೀ ಬಿ.ಆರ್. ನೀಲಕಂಠಪ್ಪ : ಅವರು ಪದೇ ಪದೇ ಹೇಳುತ್ತಿರುತ್ತಾರೆ. ಮೊದಲು ನಮಗೆ ಅವಕಾಶ ಕೊಡಿ.

ಅಧ್ಯಕ್ಷರು : ಅವರು ವಿರೋಧ ಪಕ್ಷದ ನಾಯಕರು. ಆದ್ದರಿಂದ, ಇಲ್ಲಿ ಪದೇ ಪದೇ ಎನ್ನುವ ಪ್ರಶ್ನೆ ಬರುವುದಿಲ್ಲ. ಈ ಕಡೆ ಒಬ್ಬರು ಮಾತನಾಡಿ ಆಗಲಿ ಆಮೇಲೆ ತಮಗೆ ಅವಕಾಶವನ್ನು ಕೊಡುತ್ತೇನೆ. ಈಗ ಅಶೋಕ್‌ರವರು, ನಂತರ ನೀಲಕಂಠಪ್ಪನವರು, ನಂತರ ಸಂಪಂಗಿಯವರು, ನಂತರ ಚೆಲುವರಾಯಸ್ವಾಮಿಯವರು.

5. **ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :**

ಅ. ದೊಡ್ಡ ಬೆಲೆ ಗ್ರಾಮದಲ್ಲಿ ಇಬ್ಬರು ದಲಿತರ ಕೊಲೆಯಿಂದಾಗಿ ಗ್ರಾಮಸ್ಥರು ಭಯಭೀತರಾಗಿರುವ ವಿಚಾರ.

+ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) : ಮಾನ್ಯ ಅಧ್ಯಕ್ಷರೇ, ಕಳೆದ ವಾರ ಇಬ್ಬರ ದಲಿತರ ಕೊಲೆಯಲ್ಲಿ ಪರ್ಯವಸಾನವಾದಂಥ ದೊಡ್ಡಬೆಲೆ ಗ್ರಾಮದಲ್ಲಿರುವಂಥ ಜನ ಭಯಭೀತರಾಗಿರುವುದರ ಬಗ್ಗೆ ಮತ್ತು ಈ ದಲಿತರ ಕೊಲೆಯಾಗಲು ಕಾರಣರಾದಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎನ್ನುವುದನ್ನು ನಾನು ಈಗ ಸರ್ಕಾರದ ಗಮನಕ್ಕೆ ತರಲು ಪ್ರಯತ್ನ ಮಾಡುತ್ತೇನೆ. 1992ನೇ ಇಸವಿಯಲ್ಲಿ ಪ್ರಾರಂಭವಾದಂಥ ಘಟನೆ ಇದು. ಕುದಾಯ ಇಲಾಖೆಯ ಅಧಿಕಾರಿ ಮಾಡಿದಂಥ ತಪ್ಪಿನಿಂದ ಈ ಇಬ್ಬರು ದಲಿತರ ಮಾರಣಹೋಮ